Regn No BG 155

Sri "SATYAVADI"
— DAILY —
MYSORE 4
46 th Year

Protect the cow

— ೩೯ —

ಸತ್ಯವಾದಿ
SATYAVADI

ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ನ್ಯೆ

26—3—1962

ಪ್ರವಿಷ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಇವರು ನೇತಾಜಿಯೆ ?

ಕಲ್ಕತ್ತಾ 24 — ಕಟ್ಟಾ ಬಿಹಾರಿನ ಸೋಲಮಾರಿ ಆಶ್ರಮದಲ್ಲಿ ವಾಸಿಸುತ್ತಿರುವ ಸಾಧುವು ನೇತಾಜಿ ಸುಭೋಷರಂತಿರುವರೆಂಬ ಪತ್ರಿಕಾವರದಿಗಳ ಬಗೆ ಶಾಸನಸಭೆಯಲ್ಲಿ ಗೃಹಮಂತ್ರಿಯವರು ' ಆಶ್ರಮ ಕೆಲವರ್ಷಗಳ ಹಿಂದೆ ಸ್ಥಾಪಿತವಾಯಿತೆಂದೂ ಸಾಧುವನ್ನು ಹೊರಗೂ ನೋಡಿಲ್ಲವೆಂದೂ ' ಹೇಳಿದರು.

ನಾಲ್ಕನೇ ಭಾಷೆ

ಬೆಂಗಳೂರು— ಶಾಸನ ಸಭೆಯಲ್ಲಿ ಇಲ್ಲಿಯವರೆಗೆ ಇಂಗ್ಲೀಷು, ಕನ್ನಡ, ಮರಾಠಿಯಲ್ಲಿ ಮಾತನಾಡಲಾಗಿತ್ತು : ಚಿಂತಾಮಣಿ ಅಂಜನೇಯರೆಡ್ಡಿ (ಕಾಂ) ರವರಿಗೆ ಮೊನ್ನೆ ತೆಲುಗಿನಲ್ಲಿ ಮಾತನಾಡಲು ಸ್ಪೀಕರ್ ಅವಕಾಶವಿತ್ತಿದ್ದರು

ಗೌರ್ನರರ ಗ್ರಾಂಟು

ಬೆಂಗಳೂರು 25 — 56 ನೇ ನವೆಂಬರಿಂದ ಗೌರ್ನರವರಿಗೆ ಗ್ರಾಂಟು ರೂ. 2709000 ಕೂಡುವುದಿದ್ದು ಅವರು ಅದನ್ನು ತೆಗೆದ ಕೊಂಡಿಲ್ಲವೆಂದೂ, ಗೌರ್ನರ ಸೆಕ್ರಿಟೇರಿಯಟ್ಟಿಗೂ ಅಕೌಂಟೆಂಟು ಜನರಲ್ಲರಿಗೂ ಪತ್ರವ್ಯವಹಾರ ನಡೆಯುತ್ತಿರುವುದೆಂದೂ, ಬಧಾನ ಪರಿಪತ್ರಿನಲ್ಲಿ ತಿಳಿಸಲಾಯಿತು.

ಘರ್ಷಣೆ

ಹುಬ್ಬಳ್ಳಿ 24 — ಪೋಲೀಸರಿಗೂ ಗುಂಪುಜನರಿಗೂ ನಡೆದ ಘರ್ಷಣೆಯಲ್ಲಿ ಒಬ್ಬ ಪೋಲೀಸನೂ ಸೇರಿ ಮೂರು ಮಂದಿ ಗಾಯಗೊಂಡರು.

★

ಸಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾ ಧರ್ಮಾಧಿಕಾರಿ
ದೈವಜ್ಞಶಿಖಾಮಣಿ
ಪಂಪಶ್ಯಾಮ್ಣ ಜೋಯಿಸರಿಂದ
27 ಮಂಗಳವಾರ ಪುಷ್ಯ ಜ್ಯೇಷ್ಠ

ಹನುಮಂತಯ್ಯನವರ ಹೇಳಿಕೆ

ಬೆಂಗಳೂರು— ಲಾಲಬಾಗ್ ಹೌಸಿನಲ್ಲಿ, ಲೋಕಸಭೆಗೆ ಚುನಾಯಿಸಲ್ಪಟ್ಟಿರುವ ಮಾಜಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರಿಗೆ ನಡೆದ ಸತ್ಕಾರ ಸಮಾರಂಭದಲ್ಲಿ ಅವರು ಮಾಡಿದ ಭಾಷಣದಲ್ಲಿ— ಹೊಸದಾಗಿ ಸ್ಥಾಪಿಸಲಾಗಿರುವ ಅಡಳಿತವು ಜನಪ್ರಿಯವಾಗದಿದ್ದರೆ, ಅಲ್ಲಿ ಕಾಂಗ್ರೆಸ್ಸು ಅಡಳಿತ ಮುಕ್ತಾಯಗೊಂಡಂತೆ ಆಶ್ಚರ್ಯವೇನಿಲ್ಲವೆಂದರು — ಜಾತೀಯತಾ ತೆರೆಮರೆಯಿಂದ ಗುರಿಪುಗಹರಿದುಹೋಗಿರುವ ರಾಜಕೀಯದಿಂದ ದೂರವಿರಲು ತಾವು ದೆಹಲಿಗೆ ಹೋದುದೆಂದು ಹೇಳಿದರು — ವಿಧಾನಸಾಧಕ್ಕಿಂತ ದೊಡ್ಡದೂ ಹೆಚ್ಚು ಆಕರ್ಷಣೀಯವೂ ಆದ, ಸ್ವಾತಂತ್ರ್ಯ ಚಳುವಳಿಗಾರರ ಸ್ಮಾರಕನಿರ್ಮಿಸಬೇಕೆಂದಿರುವ ತಮ್ಮ ಕನಸನ್ನು ವಿವರಿಸಿದರು.

ಕಳ್ಳ ಪೋಲೀಸ್

ಬೊಂಬಾಯಿ 23— ಪೋಲೀಸಿನವನೊಬ್ಬನು ಸರ್ಕಸ್ಸು ನೋಡಿಕೊಂಡು ಮನೆಗೆ ತರಳುತ್ತಿದ್ದ ದಂಪತಿಗಳನ್ನು ಬೆದರಿಸಿ, ಮದ್ಯಪಾನ ಮಾಡಿರುವುದಾಗಿ ಆಪಾದಿಸಿದನ : ವಾಗ್ವಾದ ನಡೆಯುತ್ತಿದ್ದಾಗ, ಮಹಿಳೆಯು ಕತ್ತಿನಲ್ಲಿದ್ದ ಸರವನ್ನು ಕಿತ್ತುಕೊಂದ ಪರಾರಿಯಾದನು : ಅಧಿಕಾರಿಗಳಿಗೆ ದೂರು ಹೋಗಲು ಅವನ ಮನೆ ಶೋಧಿಸಲ್ಪಡಲಾಗಿ 20 ಪೌಂಟ ನಸ್ಸೆ ಮತ್ತಿತರ ಪದಾರ್ಥಗಳೂ (ಸು ಮಾರು ರೂ. 6009 ಬೆಲೆ ಬಾಳುವ) ಸಿಕ್ಕಿದವು ; ಆ ಪೋಲೀಸನು ಬಂಧಿಸಲ್ಪಟ್ಟಿದ್ದಾನೆ.

ನೋಬಲ್ ಪ್ರೈಜ್

ಬೊಂಬಾಯಿ 24— ಈ ಸಾರಿ ನೋಬಲ್ ಪೀಸ್ ಪ್ರೈಸನ್ನು ಆಚಾರ್ಯ ವಿನೋದ ಭಾವೆಯವರಿಗೆ ಕೊಡುವಂತೆ ತಾವು ಶಿಫಾರ್ಸು ಮಾಡಿರುವುದಾಗಿ ಹಿಂದೆ ಈ ಪ್ರೈಸು ಪಡೆದಿರುವ ರೆ|| ಫಾದರ್ ಜಾರ್ಜ್ ಪೆಜೆಯರು ಹೇಳಿರುವರು.

ಡಾಕಾದಲ್ಲಿ ೧೯
200 ವಿದ್ಯಾರ್ಥಿಗಳ ಬಂಧನ

ಡಾಕಾ 25— ಹೊಸ ರಾಜ್ಯಾಂಗವನ್ನು ವಿರೋಧಿಸಿ, ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ನಿನ್ನೆ ನಡೆಸಿದ ಪ್ರದರ್ಶನದ ಸಂಬಂಧವಾಗಿ 200 ವಿದ್ಯಾರ್ಥಿಗಳ ಬಂಧಿಸಲ್ಪಟ್ಟಿದ್ದಾರೆ — ಡಾಕಾದಲ್ಲಿ ಪರಿಸ್ಥಿತಿ ಶಾಂತವಾಗಿದೆ

★

ಮೈಸೂರು ಮಂತ್ರಿಮಂಡಲ ಸಮಸ್ಯೆ

ನವದೆಹಲಿ 25— ಮೈಸೂರು ಮಂತ್ರಿ ಮಂಡಲ ಎಲ್ಲ ಗುಂಪುಗಳವರಿಂದ ಕೂಡಿದ್ದುದಾಗಿರುವ ವಿಚಾರದ ಬಗ್ಗೆ ಮೈಸೂರು ಮುಖ್ಯ ಮಂತ್ರಿ ಕೆಂಗಲ್ಲರು ಪ್ರಧಾನಿ ನೆಹರೂರೊಡನೆ ಮಾತುಕತೆ ನಡೆಸಿದರು ; ಜಿತ್ತಿ ಗಂಪಿಸವರಿಗೆ ಸ್ಥಾನ ಕೊಡಲು ಸಿದ್ಧರಾಗಿರುವುದಾಗಿಯೂ, ಜಿತ್ತಿಯವರನ್ನು ಸೇರಿಸಿಕೊಳ್ಳಲು ಆಸಮ್ಮ ವ್ಯಕ್ತಪಡಿಸಿದುದಾಗಿಯೂ ಗೊತ್ತಾಗಿದೆ; ಜಿತ್ತಿಯಂಗನ್ನು ಬಿಡುವುದು ಅಹಿತವೆಂದೂ ಅದರಿಂದ ಹೊಗೆಯಾಡುತ್ತಲೆ ಇರುವದೆಂದೂ ಪ್ರೆಸಮಾಂಡು ಸೂಚಿಸಿದಂತಿದೆ.

★

ನವದೆಹಲಿ 25— ಶಿಧ್ಯದಲ್ಲಿ ಭಾರತವನ್ನು ಬಿಟ್ಟುಹೋಗುವ ಯೋಜನೆ ಕಮ್ಮಿತಲ್ಲವೆಂದು ದಲೈ ಲಾಮಾ ಹೇಳಿದರು.

ಲಂಕೊ 24— ಬಡತನದ ಬಗೆ ಚರ್ಚಿಸಲು ರಷ್ಯಾ ಪ್ರಧಾನಿ ಕೃಶ್ಚೇವರ ಮತ್ತು ಅಮೇರಿಕಾ ಅಧ್ಯಕ್ಷ ಕೆನಡಿಯವರ ಉನ್ನತಮಟ್ಟದ ಸಭೆ ನಡೆಯುವುದೆಂದು ಸೋವಿಯಟ್ ಪಾರ್ಟಿ ಸೂಚಿಸಿದೆ.

ಲಂಡನ್ 25— ಮೂರದಿನ ತಿಂಗಳ್ಳ ಮುಳಿಜಾದನಂತರ ಬಹುತೇಕ ಭಾರತೀಯ ಸೈನ್ಯವು ಚೀನಾ ಸೈನ್ಯವನ್ನು ಉತ್ತರ-ಪೂರ್ವದ ಕಾಶ್ಮೀರದ ಕಡೆ ಲಡಾಕ್ ಗಡಿಯಿಂದ ಹೊಂಡಿಸುವುತೆಂದು ಸಂಜೆ ಆಬ್ಸರ್ವರಿನಲ್ಲಿ ಪ್ರಕಟವಾಗಿದೆ.

ನವದೆಹಲಿ 24— ಶ್ರೀಮತಿ ಕೆನಡಿ

ಯವರಿಗೆ ಬಹುಮಾನಿಸಲಾಗಿದ್ದ ಎಂಡು ಹುಲಿಮರಿಗಳು ಸತ್ತುಹೋದವಾಗಿ, ಅವುಗಳ ಬದಲು ಬೇರೆ ಕಳುಹಿಸಲಾಗುತ್ತಿದೆ.

ರಾವಲ್ಪಿಂಡಿ 24— ಕಳೆದ ಶುಕ್ರವಾರ ಪಾಕಿಸ್ತಾನ ದಿನದ ಸಮಾರಂಭದಂದು ಎಲಿಟರಿ ನೆರವು ಪ್ರಕಾರ ಅಮೇರಿಕಾ ಪಾಕಿಸ್ತಾನಕ್ಕೆ ಕೊಟ್ಟಿರುವ ಎಫ್ 104 ಸೂಪರಸನಿಕ್ ಜಟ್ ಫೈಟರು ಬಹಿರಂಗವಾಗಿ ಪ್ರದರ್ಶಿಸಲಾಯಿತು.

ವಿಶ್ವಜನಸಂಖ್ಯೆಯಲ್ಲಿ ಭಾರತವು ದ್ವಿತೀಯ ಸ್ಥಾನ ಪಡೆದಿದೆ ; ಚೀನಾ ಮೊದಲನೆಯ ಸ್ಥಾನ ಪಡೆದಿದೆ — 1901 ರಲ್ಲಿ ಭಾರತದ ಜನಸಂಖ್ಯೆ 22.5 ಕೋಟಿ, 1 61 ರಲ್ಲಿ ನಡೆದ ಜನಗಣತಿ ಪ್ರಕಾರ ಅದು 43.8 ಕೋಟಿಗೆ ಮುಟ್ಟಿದೆ : 1976 ರಲ್ಲಿ 62-5 ಕೋಟಿಯನ್ನು ಮುಟ್ಟುವ ನಿರೀಕ್ಷೆಯಿದೆ

ಕರಾಚಿ — ಪಾಕಿಸ್ತಾನದ ಹೊಸ ರಾಜ್ಯಾಂಗ ರೀತಿಯಲ್ಲಿ ನ್ಯಾಷನಲ್ ಅಸೆಂಬ್ಲಿಗೆ ಏಪ್ರಿಲ್ 28 ರಂದೂ, ಪ್ರಾಂತೀಯ ಅಸೆಂಬ್ಲಿಗಳಿಗೆ ಮೇ 6 ರಂದೂ ಚುನಾವಣೆ ನಡೆಯುವುದು

★

ಅಲ್ಲೂ ಉಪವಾಸ ಸತ್ಯಾಗ್ರಹ

ಚಾಟಂ (ದಕ್ಷಿಣ ಇಂಗ್ಲೆಂಡ್) 23— ಇಲ್ಲಿಯ ನೌಕಾ ಬಾರಕ್ಕಿನ ಸ್ಟಿವರ್ಡ್ ಅಂಡೂ ಮೂರೆ ಇನನ್ನು ದೂಂಪತ್ಯಾಚ್ಯಕ್ಕೆ ಹಾಕಲಾಯಿತ ; ಅವನ ಹೆಂಡತಿ ಲೂಸಿ ಇದನ್ನು ವಿರೋಧಿಸಿ ಇದು ರದ್ದಾಗುವ ತನಕ ಏನನ್ನೂ ತಿನ್ನಲು ನಿರಾಕರಿಸಿದಳ ; ಅಂಡೂ ತನ್ನ ಮಗುವನ್ನು ಎತ್ತಿಕೊಂಡು ಕೆಲಸಕ್ಕೆ ಹೋದನು — ಅವನನ್ನು ಕನಿಕರದಿಂದ ಬಿಡುಗಡೆ ಮಾಡಲಾಯಿತು

ವಿವಿಧ ವಾರ್ತೆಗಳು

ಢಾಕಾದಲ್ಲಿ ವೊನ್ಜೆ ವಿಶ್ವವಿದ್ಯಾಲ ಭಾಗದಿಂದ ಮೆರವಣಿಗೆ ನಡೆಸಲು ಹೊಂಟಿದ್ದ ವಿದ್ಯಾರ್ಥಿ ಪ್ರದರ್ಶನಕಾರರ ಗುಂಪೊಂದರ ಮೇಲೆ ಪೋಲೀಸರು ಲಾಠಿ ಚಾರ್ಜು ಮತ್ತು ಅಶ್ರುವಾಯು ಪ್ರಯೋಗ ನಡೆಯಿಸಿದರು : ಕೆಲ ವಿದ್ಯಾರ್ಥಿಗಳು ಬಂಧಿಸಲ್ಪಟ್ಟರು

೦೦ ೦೦

ಜಿನಿವಾ ಜನವರಿ 24— ಡ್ಯೂಕ್ ಆಫ್ ಎಡಿನ್‌ಬರೋ ಕಾರಿನ ಮೇಲೆ ಇಬ್ಬರು ಟೊಮಾಟೋ ಮತ್ತು ಕೋಳಿಮೊಟ್ಟೆಗಳನ್ನು ಎಸೆದರು : ಫಾಕ್ಲೆಂಡ್ ದ್ವೀಪದ 'ಬ್ರಿಟಿಷ್ ಆಕ್ರಮಣ' ಬಗ್ಗೆ ಪ್ರತಿಭಟಿಸಿದರು.

೦೦ ೦೦

ಹೈದರಾಬಾದು 24— ದೇಶದ ಅಭ್ಯುದಯಕ್ಕಾಗಿ ವಿರೋಧ ಪಕ್ಷದವರು ತಮ್ಮೊಡನೆ ಸಹಕರಿಸಬೇಕೆಂದು ಮುಖ್ಯ ಮಂತ್ರಿ ಶ್ರೀ ಸಂಜೀವರೆಡ್ಡಿಯವರು ಶಾಸನಸಭೆಯಲ್ಲಿ ಮಾಡಿದ ಭಾಷಣದಲ್ಲಿ ಕೋರಿದರು — ಮಂತ್ರಿಗಳು ಚುನಾವಣೆಯಲ್ಲಿ ಅಧಿಕಾರ ದುರುಪಯೋಗಪಡಿಸಿಕೊಂಡಿಲ್ಲವೆಂದೂ, ಪ್ರತಿಪಕ್ಷಗಳು ಸೋತಿರುವುದೇ ಇದಕ್ಕೆ ಸಾಕ್ಷಿಯೆಂದೂ, ಅವರು ಹೇಳಿದರು.

ಶ್ರೀ ಶಾರದಾ ಮಾತೆಯವರ ಕೆಲವು ಜೀವನ ಸ್ಮರಣೆಗಳು

ಮಾತೆಯವರ ಕೊನೆಯ ದಿನಗಳಲ್ಲಿ ಶಿಷ್ಯನೊಬ್ಬನು ಮನಶ್ಶಾಂತಿಯನ್ನು ಕೋರಿ ಮಾತೆಯವರಲ್ಲಿ ವಿಜ್ಞಾಪಿಸಲು, 'ಮಗೂ, ನಿನಗೆ ಮನಶ್ಶಾಂತಿ ಬೇಕಾದರೆ, ಹೀಗೆ ಮಾಡ – ಅನ್ಯರ ದೋಷಗಳನ್ನು ಹುಡುಕಬೇಡ; ಅದರ ಬದಲು ನಿನ್ನ ದೋಷಗಳನ್ನು ಹೊದಲು ತಿಳಿದುಕೋ; ಇಡೀ ಪ್ರಪಂಚವನ್ನೇ ನಿನ್ನದಾಗಿ ಮಾಡಿಕೋ; ಯಾರೂ ನಿನಗೆ ಪರಕೀಯರಲ್ಲ; ಮಗೂ, ಇಡೀ ಪ್ರಪಂಚವು ನಿನ್ನದಾಗಿಯೇ ಇದೆ'.

೦೦೦೦

ಒಮ್ಮೆ ಭಕ್ತಳೊಬ್ಬಳು ಮಾತೆಯ ದರ್ಶನಕ್ಕಾಗಿ ಬಂದಳು : ಅವಳು ಮಾತೆಯನ್ನು ಕಾಣುವುದ ಸ್ಥಳದಲ್ಲಿ ಕೆಲ; ಕೋಣೆಯಲ್ಲಿ ಗೋಲಾಪಳನ್ನು ಕಂಡು ಅವಳೇ ಮಾತೆಯೆ ದ ತಿಳಿದ ಭಕ್ತಳು ನಮಸ್ಕರಿಸಿದಳು : ಆಗ ಗೋಲಾಪಳು 'ನನಗೇಕೆ ನಮಸ್ಕರಿಸುವೆ ಮಾತೆ ಅಲ್ಲಿದ್ದಾರೆ, ಅಲ್ಲಿ ಹೋಗು' ಎಂದು ಮಾತೆಯನ್ನು ತೋರಿಸಿದಳು. ಆಗ ಅವಳು ಮಾತೆಯಿದ್ದಲ್ಲಿಗೆ ಬಂದು, ನಮಸ್ಕರಿಸಿದಾಗ, ಮಾತೆಯು ಸ್ವಲ್ಪ ವಿನೋದ ಮಾಡೋಣವೆಂದು ಭಕ್ತಳಿಗೆ 'ನೀನು ಅವಳ ಕಾಲು ಹಿಡಿದರೆ ನಿನ್ನ ಮನಸ್ಸಿನ ಬಯಕೆಗಳೆಲ್ಲ ನೆರವೇರುವುವು' ಎಂದರು; ಅವಳು ತಿರುಗೊಮ್ಮೆ ಗೋಲಾಪಳ ಕಾಲಿಗೆ ಬಿದ್ದಾಗ, ಗೋಲಾಪ ಹೇಳಿದಳು— 'ನಿನಗೆ ಕಣ್ಣಿಲ್ಲವೇ? ಅವರ ಮುಖದ ಮೇಲಿನ ತೇಜಸ್ಸನ್ನ ನೋಡಿಯೂ, ಅವರೇ ಶಾರದಾ ಮಾತೆಯೆಂದು ತಿಳಿಯುವಾರೆಡೇ?' ಎಂದಳು.

೦೦೦೦

ಒಮ್ಮೆ ಗೋಲಾಪಳು ಹೇಳಿದಳು 'ಮಾತೆ! ರಾಮಕೃಷ್ಣರ ಶಿಷ್ಯರನ್ನು ನೋಡಿ : ಒಂದೊಂದೂ ಒಂದು ರತ್ನ : ಜ್ಞಾನದಲ್ಲಿ, ವೈರಾಗ್ಯದಲ್ಲಿ, ಕಾರ್ಯಶೀಲತೆಯಲ್ಲಿ, ಎಲ್ಲರೂ ಹೆಸರಾಂತವರು : ನಿಮ್ಮ ಶಿಷ್ಯರಲ್ಲಿ ಹಾಗಿರುವವರು ಎಷ್ಟು ಮಂದಿ ದೊರೆತಾರು?' : ಮಾತೆಯೆಂದರು 'ಹೌದು ತಾಕೂರರು ಉತ್ತಮೋತ್ತಮ ವಸ್ತುಗಳನ್ನೇ ಆರಿಸಿಕೊಂಡರು : ಉಳಿದವುಗಳನ್ನೆಲ್ಲಾ ನನ್ನ ಪಾಲಿಗೆ ಬಿಟ್ಟರು.ವರು : ಹೀಗಿರಲು ನನ್ನ ಶಿಷ್ಯರನ್ನು ಅವರೊಡನೆ ಹೋಲಿಸಬೇಡ'

೦೦೦೦

ಶ್ರೀ ರಾಮಕೃಷ್ಣ ಸೇವಾ ಸಂಸ್ಥೆಗಳಲ್ಲಿ ಸೇವಾ ಕೆಲಸಗಳೇ ಹೆಚ್ಚಾಗುತ್ತವೆ : ಧ್ಯಾನಕ್ಕೆ ಸಮಯ ಸಿಗುವುದಿಲ್ಲ, ಎಂದು ಗೊಣಗುಟ್ಟುವ ಸನ್ಯಾಸಿಗಳಿಗೆ ಮಾತೆ ಹೀಗೆ ಹೇಳಿದರು— '24 ತಾಸೂ ಏಕಾಂತ ತಪಸ್ಸು ಮಾಡಲು ಸಾಧ್ಯವೇ? ಕರ್ತವ್ಯವೇ ತಪಸ್ಸು; ಅದು ಶ್ರೀ ರಾಮಕೃಷ್ಣರ ಕೆಲಸವೆಂದು ಮಾಡು : ಇಲ್ಲದಿದ್ದರೆ ಪ್ರಪಂಚದ ಹುಳಿ ಅನುಭವಕ್ಕೆ ಬೇಸತ್ತು ಕಾಡಿಗೆ ಹೋಗಿ ಹುಸಿ ಮಂದಬುದ್ಧಿಯಲ್ಲೇ ಬಿಡಾರ ಮಾಡಿದಂತೆ ಆದೀತು'. (ಪ್ರಭಾತ)

———

ಸೂಚನೆ—ಅನಿವಾರ್ಯ ಪ್ರಯುಕ್ತ ನಾಳೆ ಸತ್ಯವಾದಿ ಪ್ರಕಟಿಸಲ್ಪಡುವುದಿಲ್ಲ.

ವುಡ್‌ಲ್ಯಾಂಡ್ಸ್ ವೈಭವ 7 ನೇ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— 23-3-62 ರಿಂದ

ಶಾರದ (ತಮಿಳು) ಹೊಸ ಚಿತ್ರ

ಪಾತ್ರ— ಎಸ್ ವಿ ರಂಗರಾವ್, ಎಂ ಆರ್ ರಾಧ, ಎಸ್ ಎಸ್ ರಾಜೇಂದ್ರನ್

ಸಾವಿತ್ರಿ, ಎಂ ವಿ ರಾಜಮ್ಮ ಪಂಥ್ಯ, ಮುತ್ತುಲಕ್ಷ್ಮಿ

ರಾಜಧಾನಿಯಲ್ಲಿ ಪ್ರಪ್ರಥಮ ಪ್ರದರ್ಶನ [ದಿನವಹಿ 3 ಆಟಗಳು]

Help The 'Gorakshana'

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

SHAKTI SUDHA

A Superb Tonic

ರಷ್ಯಾ— ಈ ಜಿಂಕೆಯು ಕೊಂಬು 500 ವರ್ಷ ಹಳೆಯದಾಗಿದೆ; ಸಾರಾರ್ ಕೊಳದಲ್ಲಿ ಶೋಧನೆ ನಡೆಸಿದಾಗ ಕಂಡುಹಿಡಿಯಲಾಯಿತು.

Edited, Printed & Published by the Proprietor, Dharma Prachara Nirata M. S. Krishna Rao at the Satyavadi Press Chamarajapuram, Mysore 4